# ಬುದ್ಧಿವಂತಿಕೆ



ಒಂದು ದಿನ ಅಕ್ಬರನಿಗೆ ಅಂತಹ ತುರ್ತು ಕೆಲಸಗಳೇನೂ ಇಲ್ಲದ್ದರಿಂದ ಅಂದು ಅವನು ತನ್ನ ಪರಿವಾರದೊಂದಿಗೆ ವಿವಿಧ ವಿನೋದಾವಳಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಂಭ್ರಮಿಸುತ್ತಿದ್ದನು. ಅವರ ಜೊತೆಗೆ ಮಂತ್ರಿ, ಸೇನಾಧಿಪತಿ, ವೀರಾಧಿವೀರರೆಲ್ಲರೂ ಇದ್ದರು. ಇವರೆಲ್ಲ ಅಂದು ಮನಬಿಚ್ಚಿ ಮಾತಾಡಲು ಸೇರಿದ್ದರು. ಮಾತುಕತೆಯಲ್ಲಿ ಮನುಷ್ಯರ ದೇಹದ ಸೌಂದರ್ಯ, ಜಾಣ್ಮೆಗಳ ಬಗ್ಗೆ ವಿಶ್ಲೇಷಣೆ ನಡೆಯುತ್ತಿತ್ತು.

ಅದೇ ಸಮಯಕ್ಕೆ ಬೀರಬಲ್ಲನ ಆಗಮನವಾಯಿತು. ಅವನು ಎಲ್ಲರೂ ಸಡಗರ ಸಂಭ್ರಮದಲ್ಲಿರುವುದನ್ನು ನೋಡಿ ಅಕ್ಬರನನ್ನು ಕುರಿತು 'ಬಾದಶಹರು ಇಂದು ಅತ್ಯಂತ ಖುಷಿಯಲ್ಲಿರುವಂತಿದೆ' ಎಂದು ತನ್ನ ಮಾತುಗಳ ಮೂಲಕವೇ ಅವನ ಉತ್ತರವನ್ನು ಬಯಸಿದನು. ಅಕ್ಬರ್ 'ನಮ್ಮ ನಗುವಿನ ಕಾರಣವನ್ನು ನೀನು ಅರಿತರೆ ನೀನೂ ಕೂಡಾ ನಗುತ್ತೀಯೆ' ಎಂದಾಗ ಬೀರಬಲ್ 'ಅದಕ್ಕೇನಂತೆ ನಗುವುದಿದ್ದರೆ ಧಾರಾಳವಾಗಿ ನಗುತ್ತೇನೆ' ಎಂದನು.

ಅಕ್ಬರ್ 'ನಿನ್ನ ದೇಹದ ಬಣ್ಣ ಕಪ್ಪಲ್ಲವೇ?' ಅದಕ್ಕೆ ನಾವೆಲ್ಲರೂ ನಗುತ್ತಿದ್ದೇವೆ' ಎಂದನು. ಬೀರಬಲ್ –'ಅದರಲ್ಲಿ ನಗುವುದೇನಿದೆ? ನನ್ನ ಬಣ್ಣದ ಕಾರಣ ನಿಮಗಾರಿಗೂ ಗೊತ್ತಿಲ್ಲ' ಎಂದನು. ಅಕ್ಬರ್ ಕುತೂಹಲದಿಂದ 'ಏನು! ನಿನ್ನ ಬಣ್ಣ ಕಪ್ಪಗಿರುವುದಕ್ಕೂ ಕಾರಣವಿದೆಯೇ? ಏನದು?' ಎಂದು ಪ್ರಶ್ನಿಸಿದನು.

ಅದಕ್ಕೆ ಬೀರಬಲ್ 'ಬಾದಶಹರೇ ಆ ಭಗವಂತ ಮೊದಲು ಜಡ ವಸ್ತುಗಳನ್ನು ಸೃಷ್ಟಿಸಿ ನಂತರ ಚರ ವಸ್ತುಗಳನ್ನು, ತದನಂತರ ಜೀವಿಗಳನ್ನು ಕೊನೆಗೆ ಮಾನವರನ್ನು ಸೃಷ್ಟಿಸಿದನು. ಮಾನವನಿಗೆ ವಿಚಾರ ಶಕ್ತಿಯನ್ನು ತುಂಬಿ ಭೂಲೋಕಕ್ಕೆ ಕಳಿಸುವಾಗ 'ಬುದ್ಧಿ ಸಾಮರ್ಥ್ಯ, ದೇಹ ಸಾಮರ್ಥ್ಯ, ಧನ ಸಾಮರ್ಥ್ಯ ಹಾಗೂ ರೂಪ ಈ ನಾಲ್ಕರಲ್ಲಿ ನಿಮಗೆ ಇಷ್ಟವಾದುದನ್ನು ಆರಿಸಿಕೊಂಡು ಹೋಗಿ' ಎಂದು ಹೇಳಿದನು. ಆಗ ಈ ಆಸ್ಥಾನದಲ್ಲಿದ್ದ ಮಹನೀಯರ ಪೂರ್ವಜರೆಲ್ಲರೂ ಪೈಪೋಟಿಯ ಮೇಲೆ ನಾಲ್ಕನೆಯದಾದ ರೂಪವನ್ನೇ ತೆಗೆದುಕೊಂಡಿದ್ದಾರೆಂದು ಕಾಣುತ್ತದೆ. ಹಾಗಾಗಿ ಅಂತಹವರ ಮಕ್ಕಳು, ಮೊಮ್ಮಕ್ಕಳು ಹಾಗೂ ಪ್ರಸ್ತುತ ಸಂತತಿಯವರಿಗೂ ಆ ನಾಲ್ಕನೆಯದಾದ ರೂಪ ಮಾತ್ರ ಇವರಲ್ಲಿ ಉಳಿದಿದೆ. ಆದರೆ ನನ್ನ ಪೂರ್ವಜರು ಅತ್ಯಂತ ಸೂಕ್ಷ್ಮಮತಿಗಳಾದ ಬುದ್ಧಿವಂತರು, ಬುದ್ಧಿವಂತಿಕೆಯ ಸಾಮರ್ಥ್ಯ ಹೊಂದಿದ್ದರೆ ಉಳಿದ ಗುಣಗಳು ತನ್ನಷ್ಟಕ್ಕೆ ತಾನೇ ದೊರಕಬಹುದೆಂಬ ಯೋಚನೆಯಿಂದ ಅದನ್ನು ಪಡೆದುಕೊಂಡು ಬಂದಿರುವರು' ಎಂದನು.

ಉತ್ತರವನ್ನು ಕೇಳಿದ ಅಕ್ಬರನ ಸಹಿತ ಸಭಾ ಸದಸ್ಯರೆಲ್ಲರೂ ಒಂದೊಂದು ನೆಪ ಮಾಡಿಕೊಂಡು ಸಭಾಭವನದಿಂದ ನಿರ್ಗಮಿಸಿದರು.

**(ಸಂಗ್ರಹ): ಎಂ.ಕೆ.ಮಂಜುನಾಥ್, ಬೆಂಗಳೂರು**

# ಅಮ್ಮಾ ನನಗೆ ಕನ್ನಡ ಕಲಿಸು



ಅಮ್ಮಾ ನನಗೆ ಕನ್ನಡ ಕಲಿಸು
ಕನ್ನಡ ಕುವರ ನಾನಾಗಿಹೆನು
ಎ.ಬಿ.ಸಿ.ಡಿ. ನಂತರ ಕಲಿಯುವೆ
ಅ.ಆ.ಇ.ಈ. ಮೊದಲಿಗೆ ಕಲಿಸು

ಮುತ್ತಿನ ಮಣಿಗಳ ಕನ್ನಡ ಅಕ್ಷರ
ಒಂದೊಂದಾಗಿ ಓದಲು ಕಲಿಸು
ಮಲ್ಲಿಗೆ ಕಂಪಿನ ಘಮ..ಘಮ.. ಪದಗಳ
ಅಂದದ ಸಾಲಲಿ ಬರೆಯಲು ಕಲಿಸು

ಸುಂದರ ಕನ್ನಡ ಭಾಷೆಯ ಬರಹ
ಪದಗಳ ಜೋಡಿಸಿ ಓದುವೆನು
ನನ್ನೀ ಮುದ್ದಿನ ಕನ್ನಡದಲ್ಲಿ
ಅಮ್ಮಾ ಎಂದು ಬರೆಯುವೆನು

ಬರೆಯುವೆ ನಾನೂ ಕನ್ನಡ ಕವನ
ಕನ್ನಡ ಕತೆಗಳ ಓದುವೆನು
ಕನ್ನಡದಲ್ಲೇ ಓದುತ ಬರೆಯುತ
ಕನ್ನಡ ಭಾಷೆಯ ಬೆಳೆಸುವೆನು

**–ಚಂದ್ರಿಕಾ ಹೆಗಡೆ, ಮತ್ತಿಹಳ್ಳಿ**